ಇ) ಕೊಳ್ಳೇಗಾಲದಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಪ್ರಮಾಣದ ಕೈಗಾರಿಕಾ ಮತ್ತು ಹಜ್ ಸಚಿವರು) :

ಅ) ಹೌದು.

ಆ) ಕೊಳ್ಳೇಗಾಲದಲ್ಲಿ 7.01 ಎಕರೆ ಪ್ರದೇಶದಲ್ಲಿ ಕೈಗಾರಿಕಾ ವಸಾಹತುವನ್ನು ನಿರ್ಮಿಸಲಾಗಿದೆ. ವಿವರಗಳು ಕೆಳಕಂಡಂತಿವೆ :

| | | |
|---|---|---|
| 1. | ಕಟ್ಟಿಲಾಗಿರುವ ಮಳಿಗೆಗಳು | 24 |
| 2. | ಹಂಚಿಕೆ ಮಾಡಲಾಗಿರುವ ಮಳಿಗೆಗಳು | 22 |
| 3. | ಖಾಲಿ ಇರುವ ಮಳಿಗೆಗಳು | 02 |
| 4. | ಅಭಿವೃದ್ಧಿ ಪಡಿಸಿರುವ ನಿವೇಶನಗಳು | 16 |
| 5. | ಹಂಚಿಕೆ ಮಾಡಲಾದ ನಿವೇಶನಗಳು | 16 |

ಈ ಕೈಗಾರಿಕಾ ವಸಾಹತುವಿನಲ್ಲಿ ಮಳಿಗೆಗಳನ್ನು ಹೆಚ್ಚಿಸಲು ಸ್ಥಳ ಅಭಾವದ ಕಾರಣ, ಬೇರೆ ಕೈಗಾರಿಕಾ ವಸಹತು ನಿರ್ಮಿಸಲು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ರವರು ದಿನಾಂಕ 20-02-2003 ರಂದು ದಿನ ಪತ್ರಿಕೆಗಳಲ್ಲಿ ಬೇಡಿಕೆ ಸಮೀಕ್ಷೆಗಾಗಿ ಪ್ರಕಟಣೆ ನೀಡಿರುತ್ತಾರೆ.

ಇ) ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗಾಗಿ, ಕೈಗಾರಿಕಾ ನೀತಿ 2001-06ರ ಪ್ರಕಾರ ಕೊಳ್ಳೇಗಾಲ ತಾಲ್ಲೂಕ್ ವಲಯ-ಸಿ ನಲ್ಲಿ ವರ್ಗೀಕರಿಸಲಾಗಿದೆ. ಅದರಂತೆ ಅತಿ ಸಣ್ಣ ಕೈಗಾರಿಕೆಗಳು ಹೂಡುವ ಸ್ಥಿರಬಂಡವಾಳದ ಮೇಲೆ ಶೇ. 20 ರಷ್ಟು - ಗರಿಷ್ಠ ರೂ. 10.00 ಲಕ್ಷದ ಮಿತಿಗೊಳಪಟ್ಟು ಸಹಾಯಧನ ನೀಡಲಾಗುವುದು. ಮುದ್ರಾಂಕ ಶುಲ್ಕ ಪಾವತಿಯಲ್ಲಿ ವಿನಾಯಿತಿ, ಪ್ರವೇಶ ತೆರಿಗೆ ವಿನಾಯಿತಿ, ಪರಿವರ್ತನಾ ಶುಲ್ಕಮನ್ನಾ ಇತ್ಯಾದಿ ಸವಲತ್ತುಗಳನ್ನು ನೀಡಲಾಗುತ್ತಿದೆ. ಇದಲ್ಲದೆ ಉದ್ಯಮಿಗಳ ಅನುಕೂಲಕ್ಕಾಗಿ ಉದ್ಯಮಶೀಲತಾ ಕಾರ್ಯ ಕ್ರಮ ಪ್ರೇರಣಾ ಶಿಬಿರ, ವಿಚಾರ ಸಂಕಿರಣ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

**ಕೊಳ್ಳೇಗಾಲ ತಾಲ್ಲೂಕು ಪ್ರಥಮ ದರ್ಜೆ ಹಾಸ್ಟೆಲ್‌ನ ಮೂಲಭೂತ ಸೌಲಭ್ಯ**

1127 (1354) ಶ್ರೀ ನಂಜುಂಡಸ್ವಾಮಿ ಜಿ.ಎಸ್. (ಕೊಳ್ಳೆಗಾಲ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಳ್ಳೇಗಾಲ ತಾಲ್ಲೂಕಿನ ಪ್ರಥಮ ದರ್ಜೆ ಹಾಸ್ಟೆಲ್‌ನಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳ ಮೂಲಭೂತ ಸೌಲಭ್ಯವನ್ನು ಪೂರೈಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) -- ಹೌದು --

ಆ) ಮುಲಭೂತ ಸೌಕರ್ಯಗಳಾದ ಹಾಸಿಗೆ, ಹೊದಿಕೆ, ಸೋಲಾರ್ ಹೀಟರ್ : ಲೈಟಿಂಗ್, ಗ್ರಂಥಾಲಯ, ಬಣ್ಣದ ಟೀವಿ, ಅಡುಗೆ ಪಾತ್ರೆ ಸಾಮಾನುಗಳು, ಕ್ರೀಡಾ ಸಾಮಾಗ್ರಿ, ಸೋಪು, ಎಲ್‌ಪಿಜಿ ಗ್ಯಾಸ್ ಇತ್ಯಾದಿಗಳನ್ನು ವಿದ್ಯಾರ್ಥಿನಿಲಯಕ್ಕೆ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.